ಸಾಕ್ಷಿಗೆ ದಿನಾಂಕಃ **19.09.2024** ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲು ಃ ಪ್ರತಿವಾದಿಗಳ ಪರಃ ಮಾನ್ಯ ಎ ಜಿ ಪಿ ಯವರಿಂದ ಃ</u>

ಜಂಟಿ ಸರ್ವೆಯನ್ನು ನಾನು ತಹಶೀಲ್ದಾರ್ ರವರ ಆದೇಶದ ಮೇರೆಗೆ ಹೋಗಿರುತ್ತೇನೆ. ನಿಡಿ-8 ರಲ್ಲಿ ನನ್ನ ಸಹಿ ಇರುತ್ತದೆ ಎಂದರೆ ಸರಿ. ಸದರಿ ನಿಡಿ-8 ಸರ್ವೆಯನ್ನು ನಾನು ಮತ್ತು ಅರಣ್ಯ ಅಧಿಕಾರಿಗಳು ಮಾಡಿರುತ್ತೇವೆಂದರೆ ಸರಿ. ಸಾಕ್ಷಿಯ ಸಹಿಯನ್ನು ನಿಡಿ-8(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯಂತೆ ಹಸಿರು ಬಣ್ಣದಲ್ಲಿ ತೋರಿಸಿರುವ ರೇಖೆಯು ಮೇಗರಮಕ್ಕಿ ಅರಣ್ಯ ಮೀಸಲು ಪ್ರದೇಶ ದಾವಾ ಆಸ್ತಿಯಲ್ಲಿ ಹಾದುಹೋದ ಗಡಿಭಾಗ ಆಗಿರುತ್ತದೆ ಎಂದರೆ ಸರಿ. ನಾನು ಸದರಿ ನಿಡಿ-8 ನ್ನು ಮಾಡಿದ ನಂತರ ಅದರ ಮೂಲ ಪ್ರತಿಯನ್ನು ನಮ್ಮ ಕಚೇರಿಯಾದ ತಾಲ್ಲೂಕು ಸರ್ವೆ ಆಫೀಸಿಗೆ ನೀಡಿರುತ್ತೇನೆ. ಮತ್ತೊಂದು ಪ್ರತಿಯನ್ನು ಅರಣ್ಯ ಇಲಾಖೆಯವರ ಹತ್ತಿರ ಇರುತ್ತದೆ.

ನಾನು ತಹಶೀಲ್ದಾರ್ ರವರ ಅಧೀನದಲ್ಲಿ ಕೆಲಸ ಮಾಡುತ್ತೇನೆಂದರೆ ಸರಿ. ನಾನು ತಹಶೀಲ್ದಾರ್ ರವರ ಆದೇಶದಂತೆ ನಕಾಶೆ ಮಾಡಿದ್ದರೂ ಸಹ ಅವರಿಗೆ ಸಹಾಯ ಮಾಡಲು ಅವರ ಸಾಕ್ಷ್ಯಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ನ್ಯಾಯಾಲಯದ ಪ್ರಶ್ನೆ</u>

ನಿಡಿ-8 ರಲ್ಲಿ ತೋರಿಸಿದಂತೆ ಹಸಿರು ಬಣ್ಣದ ರೇಖೆಯು ದಾವಾ ಆಸ್ತಿಯಲ್ಲಿ ಹಾದುಹೋಗಿರುತ್ತದೆ ಎಂದರೆ ಸರಿ.

<u>ಪಾಟೀ ಸವಾಲು ಃ ವಾದಿ ಪರಃ ಶ್ರೀ. ಹೆಚ್ ಎ ಎಸ್ ವಕೀಲರಿಂದ ಃ</u>

ನಿಡಿ-8 ರಲ್ಲಿ ರೋಮನ್ ನಂಬರ್ 3 ರಲ್ಲಿ ತೋರಿಸಿರುವ ಆಸ್ತಿಯು ದಾವಾ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು ರೋಮನ್ ನಂಬರ್ 3 ರ ಮೇಲೆ ತೋರಿಸಿರುವ ಕೆಂಪು ಬಣ್ಣದ ಬಿಟ್ ಸೇರಿಸಿಕೊಂಡು 5 ಎಕರೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಕೆಂಪು ಬಣ್ಣದಬಿಟ್ ಅನ್ನು ನಿಡಿ-8(ಬಿ) ಎಂದು ಗುರುತಿಸಲಾಯಿತು. ನಿಡಿ-8 ರಲ್ಲಿ ಕೆಂಪು ಬಣ್ಣದ ಬಿಟ್ ಸೇರಿಕೊಂಡು 5 ಎಕರೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಕೆಂಪು ಬಣ್ಣದ ಬಿಟ್ ಸೇರಿಕೊಂಡು 5 ಎಕರೆ ಎಂದು ನುಡಿಯುತ್ತಾರೆ. ನಿಡಿ-8 ಮತ್ತು ನಿಪಿ-19 ನ್ನು ನಾನೇ ಮಾಡಿರುತ್ತೇನೆಂದರೆ ಸರಿ. ಸಾಕ್ಷಿ ಮುಂದುವರೆದು ನಿಪಿ-

19 ಗೈರು ವಿಲೇ ಕಡತದ ದಾಖಲೆಯಾಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ-8 ರಲ್ಲಿ ತೋರಿಸಿರುವ ರೋಮನ್ ಅಂಕೆ 3 ಹಾಗೂ ನಿಪಿ-19 ರಲ್ಲಿ ತೋರಿಸಿರುವ ಸರ್ವೆ ನಂಃ 226 ರಲ್ಲಿ ತೋರಿಸಿರುವ ಬಿಟ್ ಒಂದೇ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಿಡಿ-8 ರಲ್ಲಿ ತೋರಿಸಿರುವ ಕೆಂಪು ಬಣ್ಣದ ಬಿಟ್ ನಿಡಿ-8(ಬಿ) ಸೇರಿಕೊಂಡು 5 ಎಕರೆ ಆಗುತ್ತದೆ ಎಂದು ನುಡಿಯುತ್ತಾರೆ.

**ಃಃ ಮರು ವಿಚಾರಣೆ ಇಲ್ಲಃಃ**

**(ದಿನಾಂಕಃ 19.09.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾದಂಃ ನ.ರಾ.ಪುರ.**

ಸಾಕ್ಷಿ ಸಹಿಃ